# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006.

ಆಡಳಿತ ವಿಭಾಗ


ಸಂಖ್ಯೆ:ಕರಾಮುವಿ/ಆವಿ/ಜಿಎಲ್–2/ಇತರೆ/2024–25.  ದಿನಾಂಕ: 12–09–2024

## ಸುತ್ತೋಲೆ

**ವಿಷಯ:** ಕಡತಗಳನ್ನು ಸಮರ್ಪಕವಾಗಿ ನಿರ್ವಹಿಸುವ ಕುರಿತು.

**ಉಲ್ಲೇಖ:** 1. ಟಿಪ್ಪಣಿ ಸಂಖ್ಯೆ: ಕರಾಮುವಿ/ಆರ್‌ಪಿಎ/ಇತರೆ/2024–25. ದಿ:02.08.2024.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 31.08.2024.

* * * * *

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದಲ್ಲಿ ಹಲವಾರು ವಿಭಾಗಗಳಿದ್ದು, ಸದರಿ ವಿಭಾಗಗಳಿಂದ ಕುಲಸಚಿವರ ಆಪ್ತ ಶಾಖೆಗೆ ಬರುವವಂತಹ ಕಡತಗಳ ಪೈಕಿ ಕೆಲವು ವಿಭಾಗಗಳ ಕಡತಗಳು ಸಮರ್ಪಕವಾಗಿ ನಿರ್ವಹಣೆಯಾಗದಿರುವುದು ಕಂಡುಬಂದಿರುತ್ತದೆ. ಕಡತಗಳ ನಿರ್ವಹಣೆಯಲ್ಲಿ ಕುಲಸಚಿವರು ಕೆಲವು ನ್ಯೂನ್ಯತೆಗಳನ್ನು ಗಮನಿಸಿದ್ದು, ಅಂತಹ ನ್ಯೂನ್ಯತೆಗಳನ್ನು ಈ ಕೆಳಕಂಡತೆ ಪಟ್ಟಿ ಮಾಡಿ ತಿಳಿಸಲಾಗಿದೆ.

- ಕಡತಗಳು ಹಿಂದಿನ ವರ್ಷಗಳಿಗೆ ಸಂಬಂಧಪಟ್ಟು, ಸದರಿ ಕಡತವನ್ನೇ ಉಪಯೋಗಿಸುವ ಅವಶ್ಯಕತೆ ಉಂಟಾದಾಗ, ಕಡತವನ್ನು ಉಪಕಡತವನ್ನಾಗಿ ಮಾರ್ಪಡಿಸಿ, ಕಡತದ ಶೀರ್ಷಿಕೆಯನ್ನು 2024–25ನೇ ಸಾಲಿನಲ್ಲಿ ಮುಂದುವರೆಸುವಂತೆ ಕ್ರಮ ವಹಿಸುವುದು.
- ಕಡತದಲ್ಲಿ ಬಳಸುವ ನೋಟ್ ಶೀಟ್‌ನಲ್ಲಿ ಪುಟ ಸಂಖ್ಯೆ, ಕಾ.ನಿ.ಸಂಖ್ಯೆ, ಕಡತ ಸಂಖ್ಯೆ, ವರ್ಷ, ಇತ್ಯಾದಿ ವಿವರಗಳಿದ್ದು, ಈ ವಿವರಗಳನ್ನು ಪ್ರತಿ ನೋಟ್ ಶೀಟ್‌ನಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.
- ಕಡತದ ನೋಟ್ ಶೀಟ್‌ನಲ್ಲಿ ದಾಖಲಿಸಲ್ಪಡುವ ಅಂಶಗಳು ಸ್ಪುಟವಾಗಿಯೂ, ಕರಾರುವಕ್ಕಾಗಿಯೂ ಇರತಕ್ಕದ್ದು.
- ಕಡತದಲ್ಲಿ ಕಂಡಿಕೆ ಸಂಖ್ಯೆಗಳು ಕ್ರಮಬದ್ಧವಾಗಿರತಕ್ಕದ್ದು.
- ಮೇಲಧಿಕಾರಿಗಳು ಕಡತವನ್ನು ತರಲು ಹೇಳಿದ ಸಮಯದಲ್ಲಿ ಅನಗತ್ಯ ವಿಳಂಬ ಮಾಡುವುದು, ಇಲ್ಲ–ಸಲ್ಲದ ಕಾರಣಗಳನ್ನು ನೀಡಿ, ಕಡತವನ್ನು ನೀಡದಿರುವುದು ಮಾಡಿದಲ್ಲಿ, ಇದಕ್ಕೆ ಕಾರಣರಾದ ಸಿಬ್ಬಂದಿಯನ್ನು ಹೊಣೆಗಾರರನ್ನಾಗಿಸಿ, ಅಂತಹ ಸಿಬ್ಬಂದಿಯ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.
- ಕಡತದಲ್ಲಿ ದಾಖಲಿಸಿರುವ ಅಂಶಗಳನ್ನು ಬಹಿರಂಗಪಡಿಸುವುದು, ವಾಟ್ಸಪ್ ಮೂಲಕ ರವಾನಿಸುವುದು, ನೋಟ್ ಶೀಟ್ ಅನ್ನು ನಕಲು (ಜೆರಾಕ್ಸ್) ಮಾಡುವುದು ಇತ್ಯಾದಿಗಳು ಕಂಡುಬಂದಲ್ಲಿ, ಸಂಬಂಧಪಟ್ಟ ಕಾರ್ಯ ನಿರ್ವಾಹಕ/ಸಿಬ್ಬಂದಿಯ ಮೇಲೆ ಶಿಸ್ತು ಕ್ರಮ ಜರುಗಿಸಲಾಗವುದು.

- ಕಡತದ ನೋಟ್ ಶೀಟ್‌ಗಳ ಒಕ್ಕಣೆಯನ್ನು ಇ–ಆಫೀಸ್ ತಂತ್ರಾಂಶದಲ್ಲಿ ದಾಖಲಿಸಿ, ಕಡತದ ವಿವರಗಳನ್ನು ವಹಿಯಲ್ಲಿ ದಾಖಲಿಸಿ ಕಳುಹಿಸತಕ್ಕದ್ದು. ಇ–ಆಫೀಸ್ ತಂತ್ರಾಂಶದಲ್ಲಿ ದಾಖಲಿಸದಿರುವ ಹಾಗೂ ವಹಿಯಲ್ಲಿ (ಲೆಡ್ಜರ್‌ನಲ್ಲಿ) ದಾಖಲಿಸದೇ ನೀಡಲ್ಪಡುವ ಕಡತವನ್ನು ಹಿಂತಿರುಗಿಸಲಾಗುವುದು.

ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿಗಳು ತತ್‌ಕ್ಷಣದಿಂದ ಜಾರಿಗೆ ಬಂದಂತೆ ಸುತ್ತೋಲೆಯಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕಡತಗಳ ನಿರ್ವಹಣಾ ಕಾರ್ಯವನ್ನು ಉತ್ತಮವಾಗಿ ನಿರ್ವಹಿಸುವಂತೆ ತಿಳಿಸಲಾಗಿದೆ.

ಕುಲಸಚಿವ

**ಗೆ,**

1. ವಿ.ವಿ. ನಿಲಯದ ಎಲ್ಲಾ ಬೋಧಕ ಮತ್ತು ಬೋಧಕೇತರ ನೌಕರರು, ಕರಾಮುವಿ, ಮೈಸೂರು.
2. ಎಲ್ಲಾ ಪ್ರಾದೇಶಿಕ ಕೇಂದ್ರಗಳ ಪ್ರಾದೇಶಿಕ ನಿರ್ದೇಶಕರು, ಹಾಗೂ ಪ್ರಾದೇಶಿಕ ಕೇಂದ್ರಗಳ ಎಲ್ಲಾ ನೌಕರರು ಕರಾಮುವಿ.

**ಪ್ರತಿ,**

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್ (ಅಧ್ಯಯನ ಕೇಂದ್ರಗಳು), ಕರಾಮುವಿ, ಮೈಸೂರು.
3. ಮಾನ್ಯ ಕುಲಪತಿಗಳ ಆಪ್ತಶಾಖೆ, ಕರಾಮುವಿ, ಮೈಸೂರು.
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
5. ಡಾ. ನವೀನ್ ಕುಮಾರ್.ಸಿ.ಜಿ, ನೋಡಲ್ ಆಫೀಸರ್, ವೆಬ್‌ಸೈಟ್, ಕರಾಮುವಿ, ಮೈಸೂರು, ಈ ಪ್ರಕಟಣೆಯನ್ನು ವಿವಿ ನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
6. ಕಛೇರಿ ಪ್ರತಿ.